OS No.124/2024 PW-1

**<u>ಮಧ್ಯಂತರ ಅರ್ಜಿಯ ಮೇರೆಗೆ ದಿನಾಂಕ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಆರ್ ಕೆ ವಕೀಲರಿಂದಃ</u>**

ನಾನು ತೆರಿಗೆದಾರಳು ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು 35 ಲಕ್ಷ ಹಣ ಪ್ರತಿವಾದಿಗೆ ಕೊಟ್ಟ ಬಗ್ಗೆ ತೆರಿಗೆಯಲ್ಲಿ ತಿಳಿಸಿಲ್ಲ. ನನ್ನ ಆದಾಯದ ಮೂಲದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಆಭರಣ ಅಡಮಾನ ಮಾಡಿ ಹಣವನ್ನು ಕೊಟ್ಟಿರುತ್ತೇನೆ. ಆಸ್ತಿ ಖರೀದಿ ಮಾಡಲು ಆಭರಣ ಮಾಡಿರುತ್ತೇನೆ. ನಾನು 2022 ರಿಂದ ಪ್ರತಿವಾದಿಗೆ ಹಣವನ್ನು ಕೊಟ್ಟಿರುತ್ತೇನೆ. ನಾನು ಆಭರಣ ಮಾಡಿದ ದಿನಾಂಕ ಪೆಬ್ರವರಿ 2023 ರಲ್ಲಿ ಮಾಡಿರುತ್ತೇನೆ. ಕರಾರು ದಿನಾಂಕ 24.03.2023 ಆಗಿರುತ್ತದೆ. ಅಡಮಾನ ಮಾಡಿದ ಆಭರಣ ಗಳು ನನಗೆ ಸೇರಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ. ನನಗೆ ಗಿರವಿ ಇಟ್ಟಂತಹ ಆಭರಣಗಳನ್ನು ಮತ್ತೆ ನಾನು ಅಡಮಾನ ಮಾಡಿರುತ್ತೇನೆಂದರೆ ಸುಳ್ಳು. 2019ರವರೆಗೆ ತೆರಿಗೆಯಲ್ಲಿ ತಿಳಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿಯನ್ನು ಪರಿಚಯ ಮಾಡಿಕೊಟ್ಟ ನನ್ನ ಸ್ನೇಹಿತನ ಹೆಸರು ನಿತಿನ್. ಅವರನ್ನು ಪಕ್ಷಗಾರರನ್ನಾಗಿ ಮಾಡಲು ಅವಶ್ಯಕತೆ ಇಲ್ಲ. ನಾನು ಪ್ರತಿವಾದಿಗೆ ದಿಃ 28.09.2022 ರಂದು ಮೊದಲ ಬಾರಿಗೆ 7 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ಆಗ ಪ್ರತಿವಾದಿ ಚೆಕ್ ಅನ್ನು ನೀಡಿದ್ದರು. ಚೆಕ್ ನಲ್ಲಿ ದಿನಾಂಕ ಬಿಟ್ಟು ಉಳಿದದನ್ನೆಲ್ಲಾ ಪ್ರತಿವಾದಿ ಬರೆದುಕೊಟ್ಟಿದ್ದರು. ಈ 7 ಲಕ್ಷ ಹಣವನ್ನು ನಗದಾಗಿ ನೀಡಿರುತ್ತೇನೆ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಅಂದರೆ ರಶೀದಿಯನ್ನು ನೀಡಿರುತ್ತೇನೆ. ಹಣಕಾಸಿನ ಬಿಕ್ಕಟ್ಟಿನ ಸಲುವಾಗಿ ಪ್ರತಿವಾದಿ ನನ್ನ ಬಳಿ ಹಣವನ್ನು ಕೇಳಿರುತ್ತಾರೆ. ನನ್ನ ಮಗಳ ಕಾಲೇಜಿನ ಸೀಟು ಪ್ರತಿವಾದಿ ಕೊಡಿಸಿದಾಗಿನಿಂದ ಪ್ರತಿವಾದಿ ಪರಿಚಯ. ಪ್ರತಿವಾದಿ ಹಣ ಕೇಳಿದ ದಿನಾಂಕ ನೆನಪಿಲ್ಲ. ಪ್ರತಿವಾದಿ ಕೇಳಿದ ತಕ್ಷಣ ನಾನು ಹಣ ಕೊಟ್ಟಿರುತ್ತೇನೆ. ಪ್ರತಿವಾದಿ ನನ್ನನ್ನು ಹಣ ಕೇಳಿದಾಗ ನನ್ನ ಜೊತೆ ಯಾರು ಇರಲಿಲ್ಲ. ಆಗ ಪ್ರತಿವಾದಿಯ ಜೊತೆಯೂ ಸಹ ಯಾರು

ಇರಲಿಲ್ಲ. ಪ್ರತಿವಾದಿ ನಿತಿನ್ ಜೊತೆ ಇದ್ದಾಗ ನನ್ನ ಬಳಿ ಹಣ ಕೇಳಿರುತ್ತಾರೆಂದರೆ ಸುಳ್ಳು. ಪ್ರತಿವಾದಿಗೆ ಮೊದಲು ಸಾಲವಾಗಿ ಹಣವನ್ನು ಕೊಟ್ಟಿರುತ್ತೇನೆ. ಆಗ ಪ್ರತಿವಾದಿ ಶೇಕಡಾ 3 ರಷ್ಟು ಹೆಚ್ಚು ಹಣ ಕೊಡುತ್ತೇನೆಂದು ತಿಳಿಸಿರುತ್ತಾರೆ. 6 ತಿಂಗಳ ಒಳಗೆ ಹಣ ಹಿಂದಿರುಗಿಸುತ್ತೇನೆಂದು ತಿಳಿಸಿರುತ್ತಾರೆ. ಮೊದಲನೇ ಸಲ ನಾನು 3 ಚೆಕ್ಕುಗಳನ್ನು ಪಡೆದಿರುತ್ತೇನೆ. ಅವು ಯಾವ ಬ್ಯಾಂಕ್ ದು ಎಂದು ನೆನಪಿಲ್ಲ. ಇದರ ಜೊತೆ ಬೇರೆ ದಾಖಲೆಯನ್ನು ಪಡೆದಿಲ್ಲ. ಮೊದಲನೇ ಸಲ ಚೆಕ್ಕು ಗಳು  ನೀಡಿದ ನಂತರ 2ನೇ ಸಲ 3 ಲಕ್ಷ ಹಣವನ್ನು ಪ್ರತಿವಾದಿಗೆ ಕೊಟ್ಟಾಗ 6 ತಿಂಗಳ ಒಳಗೆ ಹಣ ಹಿಂದಿರುಗಿಸುತ್ತೇನೆಂದು ಸ್ಟಾಂಪ್ ಪೇಪರ್ ಮೇಲೆ ಬರೆದುಕೊಟ್ಟಿರುತ್ತಾರೆ. ಈ ಹಣವನ್ನು ಅಕ್ಟೋಬರ್ 2022 ರಲ್ಲಿ ನಮ್ಮ ಮನೆಯಲ್ಲಿ  ಕೊಟ್ಟಿರುತ್ತೇನೆ. ಹಣಕಾಸಿನ ಬಿಕ್ಕಟ್ಟಿನ ಸಲುವಾಗಿ ಕೇಳಿರುತ್ತಾರೆ. 3 ಲಕ್ಷ ಹಣವನ್ನು ಪ್ರತಿವಾದಿಗೆ ಕೊಟ್ಟಾಗ ಚೆಕ್ಕು ಮತ್ತು ಸ್ಟಾಂಪ್ ಪೇಪರ್ ಪಡೆದಿರುತ್ತೇನೆ. ಈ 3 ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಈ ಹಣ ನನ್ನ ಬ್ಯಾಂಕ್ ಖಾತೆಯಲ್ಲಿತ್ತು. ಈ ಹಣವನ್ನು ಪ್ರತಿವಾದಿ ನಗದಾಗಿ ಕೇಳಿದ್ದರಿಂದ ಕೊಟ್ಟಿರುತ್ತೇನೆ. 2ನೇ ಬಾರಿ ಎಷ್ಟು ಚೆಕ್ಕು ಪಡೆದೆ ಎಂದು ಹೇಳಲು ಆಗುವುದಿಲ್ಲ.

ನಂತರ ಜನವರಿ 2023 ರಲ್ಲಿ ಪ್ರತಿವಾದಿ ಆತನ ತಂದೆಗೆ ಉಷಾರಿಲ್ಲ ಎಂದು ನಮ್ಮ ಮನೆಯಲ್ಲಿ ನಗದಾಗಿ 5 ವರೆ ಲಕ್ಷ ಹಣವನ್ನು ಪಡೆದಿರುತ್ತಾರೆ. ಈ ಸಮಯದಲ್ಲಿ ಜಯಲಕ್ಷ್ಮೀ ನನ್ನ ಸ್ನೇಹಿತೆ ಇದ್ದರು. ಸ್ಟಾಂಪ್ ಪೇಪರ್ ಅನ್ನು ಅವರೇ ತಂದಿರುತ್ತಾರೆ. ನಿಪಿ-1 ಸ್ಟಾಂಪ್ ಪೇಪರ್ ವಾದಿ ಎಂದರೆ ನನ್ನ ಹೆಸರು ಇದೆ ಎಂದರೆ ಸಾಕ್ಷಿಯು ಪ್ರತಿವಾದಿ ಬರೆಯಿಸಿಕೊಂಡು ಹೋಗಿ ತಂದಿರುತ್ತಾರೆ. ನಿಪಿ-1,5 ಮತ್ತು 6  ಸ್ಟಾಂಪ್ ಪೇಪರ್ ಗಳು ನನ್ನ ಹೆಸರಿಲ್ಲಿದೆ ಎಂದರೆ ನಿಜ.

ಮೊದಲನೇ ಸಲ 7 ಲಕ್ಷ ಕೊಟ್ಟಾಗ ಸಮಯ ನೆನಪಿಲ್ಲ. ಎಷ್ಟು ಕಂತುಗಳಲ್ಲಿ ಹಣ ಕೊಟ್ಟೆ ಎಂದು ಹೇಳಲು ಆಗುವುದಿಲ್ಲ. ಹಾಜರು ಪಡಿಸಿರುವ ದಾಲಖಲೆಗಳು ಬಿಟ್ಟು ಪ್ರತಿವಾದಿಗೆ ಸಂಬಂದಪಟ್ಟ ದಾಖಲೆಗಳು ನನ್ನ ಬಳಿ ಇಲ್ಲ. ನಿಪಿ-1,5 ಮತ್ತು 6  ಸ್ಟಾಂಪ್ ಪೇಪರ್ ಗಳು  ನಮ್ಮ ಬೆಂಗಳೂರಿನ ಮನೆಯಲ್ಲಿ ಆಗಿದೆ.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**